ಇ) ಹಾಗಿದ್ದಲ್ಲಿ, ಇಲಾಖೆಯವರು ಮಾಡಿದ ತಪ್ಪಿಗಾಗಿ ಫಲಾನುಭವಿಗಳಿಂದ ಈ ರೀತಿ ಹಣ ಸಂಗ್ರಹ ಮಾಡುವುದು ಫಲಾನುಭವಿಗಳಿಗೆ ಶಿಕ್ಷೆ ನೀಡಿದಂತಾಗುವುದಿಲ್ಲವೇ;

ಇಲ್ಲ.

ಈ) ಈ ಶುಲ್ಕ ರದ್ದು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು?

ಉದ್ಭವಿಸುವುದಿಲ್ಲ.

ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1249(1407)

ಸದಸ್ಯರ ಹೆಸರು : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)

ಉತ್ತರಿಸುವ ಸಚಿವರು : ಶ್ರೀ ಶಶಿಣಂತ.ಅ.ನಾಯಿಕ (ತೋಟಗಾರಿಕೆ ಸಚಿವರು)

ಅ) ಮಲೆನಾಡು ಭಾಗದ ಅಡಿಕೆ ತೋಟಗಳಲ್ಲಿ ಹಳದಿ ಎಲೆ ರೋಗ ವ್ಯಾಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೋಗ ಎಷ್ಟು ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು);

ಹೌದು, ಈ ರೋಗವು ಸುಮಾರು 13800 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ಜಿಲ್ಲಾವಾರು, ತಾಲ್ಲೂಕುವಾರು ವಿವರ ಇಂತಿವೆ:

ಜಿಲ್ಲೆ ಮತ್ತು ತಾಲ್ಲೂಕು	ಹಳದಿ ಎಲೆ ರೋಗ ವ್ಯಾಪಿಸಿರುವ ಪ್ರದೇಶ (ಎಕರೆಗಳಲ್ಲಿ)
1.ಚಿಕ್ಕಮಗಳೂರು	
ಶೃಂಗೇರಿ ತಾಲ್ಲೂಕು	3000
ಕೊಪ್ಪ ತಾಲ್ಲೂಕು	3750
ನರಸಿಂಹರಾಜಪುರ ತಾಲ್ಲೂಕು	1300
ಮೂಡಿಗೆರೆ	5390
2.ಕೊಡಗು	
ಮಡಿಕೇರಿ ತಾಲ್ಲೂಕು	360
ಒಟ್ಟು	13800

ಆ) ಈ ರೋಗ ತಡೆಗಟ್ಟಲು ಸಾಧ್ಯವಾಗದಿರುವುದಕ್ಕೆ ಕಾರಣಗಳು;

ಈ ರೋಗವು ಫೈಟೋಪ್ಲಾಸ್ಮ ಎಂಬ ನಂಜಾಣುವಿನಿಂದ ಬರುತ್ತಿದ್ದು ಇದರ ನಿಯಂತ್ರಣಕ್ಕೆ ಯಾವುದೇ ಔಷಧಿ ಇರುವುದಿಲ್ಲ. ವಿಜ್ಞಾನಿಗಳ ಪ್ರಕಾರ ಸಮಗ್ರ ಪೋಷಕಾಂಶಗಳ ಸಮತೋಲನೆ ಕಾಪಾಡುವುದರಿಂದ ಹಾಗೂ ಹೆಚ್ಚು ರೋಗ ಬಂದಂತಹ ಗಿಡಗಳನ್ನು ಕಿತ್ತು ನಾಶಪಡಿಸುವುದರಿಂದ ಇದರ ಹರಡುವಿಕೆಯನ್ನು ತಡೆಗಟ್ಟಬಹುದು. ಈ ಬಗ್ಗೆ ಸಂಶೋಧನೆ ಮುಂದುವರೆದಿದೆ.

ಇ) ಶೃಂಗೇರಿಯಲ್ಲಿ ಸರ್ಕಾರಿ ಭೂಮಿ ಲಭ್ಯವಿರುವುದರಿಂದ ಈ ರೋಗದ ಬಗ್ಗೆ ಸಂಶೋಧನೆ ನಡೆಸಲು ಸಂಶೋಧನಾ ಕೇಂದ್ರ ತೆರೆಯಲಾಗುವುದೇ, ಹಾಗಿದ್ದಲ್ಲಿ, ಯಾವಾಗ ತೆರೆಯಲಾಗುವುದು.

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಶೃಂಗೇರಿಯಲ್ಲಿ ಅಡಿಕೆ ಸಂಶೋಧನಾ ಸಂಸ್ಥೆ ಸ್ಥಾಪನೆಯ ಬಗ್ಗೆ ಘೋಷಿಸಲಾಗಿದೆ. ಈ ಕುರಿತು ಮುಂದಿನ ಕ್ರಮ ಜರುಗಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1250(1408)**
ಸದಸ್ಯರ ಹೆಸರು	:	**ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)**
ಉತ್ತರಿಸುವ ಸಚಿವರು	:	**ಶ್ರೀ ಬಂಡೆಪ್ಪ ಖಾರಂಪುರ (ಕೃಷಿ ಸಚಿವರು)**

ಅ) ಈ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಇಲಾಖೆಯಿಂದ ಇದುವರೆಗೆ ವಿತರಿಸುವ ವಿವಿಧ ಯಂತ್ರೋಪಕರಣಗಳು ಯಾವುವು (ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುವಾರು ಯಂತ್ರೋಪಕರಣ ವಿತರಣೆಯ ವಿವರ ನೀಡುವುದು);

ಈ ಸಾಲಿನಲ್ಲಿ ರಾಜ್ಯದ ರೈತರಿಗೆ ಕೃಷಿ ಇಲಾಖೆಯಿಂದ ಇದುವರೆಗೆ ವಿತರಿಸಿದ ವಿವಿಧ ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–01 ರಲ್ಲಿ ನೀಡಲಾಗಿದೆ. ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ವಿತರಿಸಲಾದ ತಾಲ್ಲೂಕುವಾರು ಯಂತ್ರೋಪಕರಣಗಳ ವಿವರಗಳನ್ನು ಅನುಬಂಧ–2 ರಲ್ಲಿ ನಮೂದಿಸಿದೆ.